# ಬಿ.ಎಲ್. ವೇಣು



ಚಿತ್ರ: ಭವಾನಿ ಮಂಜು

ಓದುಗರ ಅಚ್ಚುಮೆಚ್ಚಿನ ಲೇಖಕ ಬಿ.ಎಲ್. ವೇಣು. ಬಂಡಾಯದ ಕತೆ, ಕಾದಂಬರಿಗಳಿಂದ ಬರವಣಿಗೆ ಆರಂಭಿಸಿದ ಅವರ ಬರಹದ ಬದುಕಿಗೆ ನಾಲ್ಕು ದಶಕಗಳು. ಇಷ್ಟು ಕಾಲವೂ ಅವರು ನಿರಂತರವಾಗಿ ಸಾಹಿತ್ಯ, ಸಿನಿಮಾ, ಧಾರಾವಾಹಿಗಳ ಕತೆ, ಸಂಭಾಷಣೆಗಳ ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

**29** ಕಾದಂಬರಿಗಳನ್ನು ವೇಣು ಬರೆದಿದ್ದು ಅದರಲ್ಲಿ ಏಳು ಐತಿಹಾಸಿಕ ಕಾದಂಬರಿಗಳಿವೆ. 'ಗಂಡುಗಲಿ ಮದಕರಿನಾಯಕ' ಅಪಾರ ಜನಪ್ರೀತಿ ಗಳಿಸಿದ ಅವರ ಐತಿಹಾಸಿಕ ಕಾದಂಬರಿ. 'ಕಲ್ಲರಳಿ ಹೂವಾಗಿ' ಚಲನಚಿತ್ರವಾಗಿ ಪ್ರಸಿದ್ಧಿ ಪಡೆದಿದೆ. ಅವರ 10 ಕಥಾಸಂಕಲನಗಳು, ನಾಲ್ಕು ನಾಟಕಗಳು, ಎಂಟು ಮಿನಿಕಾದಂಬರಿಗಳು, ನಾಲ್ಕು ಅಂಕಣ ಬರಹಗಳ ಪುಸ್ತಕಗಳು ಪ್ರಕಟವಾಗಿವೆ. 'ಲೋಕದಲ್ಲಿ ಜನಿಸಿದಾ ಬಳಿಕ' ಅವರ ಆತ್ಮಕತೆ. ಈವರೆಗೆ ಒಟ್ಟು 45 ಕೃತಿಗಳು ಪ್ರಕಟವಾಗಿದ್ದು, **11** ಕೃತಿಗಳು ಸಿನಿಮಾ ಆಗಿವೆ.

**62** ಸಿನಿಮಾಗಳಿಗೆ ವೇಣು ಸಂಭಾಷಣೆ ರಚಿಸಿದ್ದಾರೆ. ಕನ್ನಡದ ಹಲವು ಪ್ರತಿಭಾವಂತ ಸಿನಿನಿರ್ದೇಶಕರೊಂದಿಗೆ ಕೆಲಸ ಮಾಡಿದ ಅನುಭವ ಅವರದ್ದು. ಅವರ ಕಾದಂಬರಿ ಹಾಗೂ ಸಂಭಾಷಣೆ ಆಧಾರಿತ 'ಪ್ರೇಮಪರ್ವ', 'ಪರಾಜಿತ', 'ಅಜೇಯ' ಸೇರಿದಂತೆ ಎಂಟು ಸಿನಿಮಾಗಳು **100** ದಿನಗಳ ಪ್ರದರ್ಶನ ಕಂಡಿವೆ. ಅವರ ಚಿತ್ರಕತೆ, ಸಂಭಾಷಣೆ ಇರುವ 'ಒಲವಿನ ಉಡುಗೊರೆ' ಸಿನಿಮಾ **25** ವಾರಗಳ ಪ್ರದರ್ಶನ ಕಂಡಿತು.

ವೇಣು, ಆರೋಗ್ಯ ಇಲಾಖೆಯಲ್ಲಿ ಕಚೇರಿ ಅಧೀಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಪ್ರಸ್ತುತ ಚಿತ್ರದುರ್ಗದಲ್ಲಿ ನೆಲೆಸಿದ್ದಾರೆ.

ರೇಗುವಂತೆಯೂ ಇಲ್ಲ. ವಾದವೂ ಸಲ್ಲ. ಸಮಜಾಯಿಷಿ ಹೇಳುತ್ತ ಮಾತಿಗೆ ಮಾತು ಬೆಳಸುವ ಬದಲು ಸೋತ ನಗೆಯೆ ಪರಹಾರ. ಹಲ್ಲು ಗಿಂಜುತ್ತೇನೆ. ಹಲ್ಲುಗಿಂಜುವುದರಲ್ಲಡಗಿರುವ ಮಹತ್ವ– ಏನೆಂಬುದು ನನಗೆ ಈಗೆರಡು ದಿನಗಳಿಂದ ಚೆನ್ನಾಗಿಯೇ ಅರ್ಥವಾಗಿದೆ. ಇವರು ಬಂದ ಬಸ್ ಕೆಟ್ಟು ಮಧ್ಯರಾತ್ರಿ ಬಂದರೆ, ಅದು ನನ್ನ ತಪ್ಪೇ? ಬಂದನಂತರ ವರಪೂಜೆಯಾಗಬೇಡವೆ. ಲಗ್ನಪತ್ರಿಕೆ ಓದಿಸೋದು ಇತ್ಯಾದಿ ಮಂಗಳಕಾರ್ಯಗಳು ಮುಗಿದು, ನಂತರ ಊಟವೆಂದರೆ ಲೇಟಾಗಿರಬಹುದು.

'ಹಾಕಿರೋದೇ ಒಂದೆಳೆಸರ– ಅದಾದ್ರೂ ರವಷ್ಟು ವೈನಾಗಿರಬ್ಯಾಡ್ವಾ. ಏನು ಬಿಕನಾಸಿ ಆಟ ಇದು' ವರನ ತಾಯಿ ಅಂದಾಗ ಉರಿದರೂ ಕೈತೀಡಿ, ಹಲ್ಲುಗಿಂಜಿ ಗಂಭೀರ ಸನ್ನಿವೇಶದಿಂದ